**ದಿನಾಂಕಃ 23-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಸ್.ಪಿ.ಸಿ., ವಾದಿ ಪರ ವಕೀಲರಿಂದಃ**

1. ವಾದಿಯರ ಮತ್ತು ಪ್ರತಿವಾದಿಯರ ಮೂಲ ಪುರುಷ ಶಿವಶಂಕ್ರಯ್ಯರವರು ನನಗೆ ಅಜ್ಜನಾಗಬೇಕು ಎಂದರೆ ಸರಿ. ಅವರ ತಂದೆಯ ಹೆಸರು ರುದ್ರಯ್ಯ ಎಂದರೆ ಸರಿ. ದಿನಾಂಕಃ 18-05-1991 ರಂದು ದಾವಾ ಶೆಡ್ಯೂಲ-ಬಿ ಆಸ್ತಿಯನ್ನು ನನ್ನ ಮಾವನಾದ ಮೃತ 4 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎನ್ನುವ ಬಗ್ಗೆ ಖರೀದಿ ಪತ್ರವನ್ನು ಹಾಜರುಪಡಿಸಿಲ್ಲ. ನನ್ನ ತಾಯಿಯವರು ಕೊಟ್ಟ ಮೋಕ್ತಿಯಾರ ಪತ್ರದಲ್ಲಿ, ನನ್ನ ತಾಯಿಯು ಅನಾರೋಗ್ಯದಿಂದ ಬಳಲುತ್ತಿದ್ದಾರೆಂದು ಹೇಳಿದ್ದು ಅವರಿಗೆ ಚಿಕಿತ್ಸೆಯನ್ನು ಕೊಡಿಸಿರುವ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹಾಜರು ಪಡಿಸಿಲ್ಲ, ದಾಖಲೆ ಇದೆ ಎಂದು ನುಡಿಯುತ್ತಾರೆ.

**2.** ನನಗೆ ಶಿವಶಂಕ್ರಯ್ಯ ವರದಿಮಠರವರ ಕುಟುಂಬದ ಬಗ್ಗೆ ಮಾಹಿತಿ ಇದೆ. ಸದ್ರಿಯವರು ಮೂಲತಃ ಚಹಾಪುಡಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ನನ್ನ ಮಾವನಾದ 4 ನೇ ಪ್ರತಿವಾದಿಯು ಕೂಡಾ ಚಹಾಪುಡಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಅಸಲು ದಾವಾ ಸಂಖ್ಯೆ 137/2013 ನ್ನು ನನ್ನ ತಾಯಿ ಮತ್ತು ನನ್ನ ಚಿಕ್ಕಮ್ಮ ಸೇರಿಕೊಂಡು ನನ್ನ ಮಾವನಾದ 4 ನೇ ಪ್ರತಿವಾದಿ ಅವರ ಹೆಂಡತಿ ಹಾಗೂ ಈ ದಾವೆಯ ಇತರ ಪ್ರತಿವಾದಿಯರ ವಿರುದ್ಧ ಸಲ್ಲಿಸಿದ್ದರು ಎಂದರೆ ಸರಿ. ನಾನು ಪದವಿದರನಾಗಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದ್ರಿ ಅಸಲು ದಾವಾ ಸಂಖ್ಯೆ 137/2013 ರಲ್ಲಿ ವಾದಿಯರಾದ ನನ್ನ ತಾಯಿ ಮತ್ತು ಚಿಕ್ಕಮ್ಮ ಮೇಮೋ ಸಲ್ಲಿಸಿ ದಾವೆ ನಡೆಸುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎಂದು

ಒಪ್ಪಿಕೊಂಡಿರುತ್ತಾನೆ. ಸದ್ರಿ ದಾಖಲೆಯು ಅಸಲು ದಾವಾ ಸಂಖ್ಯೆ 1372013 ರಲ್ಲಿ ವಾದಿಯರು ಸಲ್ಲಿಸಿರುವ ಮೇಮೋದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ಸದ್ರಿ ದಾವೆಯಲ್ಲಿ ನನ್ನ ತಾಯಿ, ನನ್ನ ಚಿಕ್ಕಮ್ಮ ಆಸ್ತಿಯಲ್ಲಿ ಹಿಸ್ಸೆಯನ್ನು ಕೇಳಿ ಹಾಕಿದ್ದರು ಎಂದರೆ ಸರಿ. ಸದ್ರಿ ದಾವೆಯನ್ನು ಶ್ರೀ ಎಸ್.ಆರ್. ಹೆಗಡ, ವಕೀಲರ ಮೂಲಕ ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದ್ರಿ ದಾಖಲೆಯು ಅಸಲು ದಾವಾ ಸಂಖ್ಯೆ 137/2013 ರ ವಾದ ಪತ್ರ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದ್ರಿ ದಾಖಲೆಯು ಅಸಲು ದಾವಾ ಸಂಖ್ಯೆ 137/2013 ರ ವಾದ ಪತ್ರದ ದೃಢೀಕೃತ ನಕಲಾಗಿದ್ದು ಅದನ್ನು **ನಿಪಿ-12** ಎಂದು ಗುರುತಿಸಲಾಯಿತು.

**3.** ದಾವಾ ಶೆಡ್ಯೂಲ್-ಬಿ-1 ನೇ ಆಸ್ತಿಯು ಚನ್ನಬಸಯ್ಯ ವರದಿಮಠ ಇವರಿಂದ ರುದ್ರಯ್ಯ ಇವರಿಗೆ ಬಂದಿರುತ್ತದೆ ಎಂದರೆ ಸರಿ. ನಂತರ ರುದ್ರಯ್ಯನವರಿಂದ ಶಿವಶಂಕ್ರಯ್ಯರವರಿಗೆ ಬಂದಿರುತ್ತದೆ ಎಂದರೆ ಸರಿ. ಸದ್ರಿ ಆಸ್ತಿಯಲ್ಲಿ ಅರ್ಧ ಭಾಗವನ್ನು ಶಿವಶಂಕ್ರಯ್ಯರವರು ಹೆಂಡತಿಯ ಹೆಸರಿಗೆ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜಿಯಾದ ಅನುಸುಯಾದೇವಿರವರು ನವೆಂಬರ 2015 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ಅಜ್ಜಿ ಅನುಸುಯಾದೇವಿರವರು ಹಾವೇರಿಯ ಇಜಾರಿಲಕ್ಮಾಪುರ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿಯು ಬಸ್ತಿ ಓಣಿ, ಹಾವೇರಿಯಲ್ಲಿ ವಾಸವಾಗಿದ್ದರು ಎಂದು ನುಡಿಯುತ್ತಾರೆ. ನಂತರ ಸದ್ರಿಯವರು ಅನಾರೋಗ್ಯದಿಂದ ಹಾವೇರಿಯಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ.

4. ನನ್ನ ಮಾವನಾದ ರುದ್ರಯ್ಯನವರು ಚಹಾಪುಡಿ ಮಾಡುತ್ತಿದ್ದು, ಆ ಸಮಯದಲ್ಲಿ ನನ್ನ ತಾಯಿ ಮತ್ತು ನನ್ನ ಚಿಕ್ಕಮ್ಮ ಒಟ್ಟಿಗೆ ಒಂದೇ ಮನೆಯಲ್ಲಿ

ವಾಸವಾಗಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ 4 ನೇ ಪ್ರತಿವಾದಿಯು ರುದ್ರಯ್ಯ ಜೀವಿತ ಅವಧಿಯಲ್ಲಿ ಮನೆಯಲ್ಲಿ ಯಾವುದೇ ಕಾರ್ಯಕ್ರಮ ನಡೆದರೆ ಅವರ ಅಕ್ಕ-ತಂಗಿ ಅಂದರೆ ನನ್ನ ತಾಯಿ ಮತ್ತು ಅವರ ತಂಗಿಯನ್ನು ಕರೆಯಿಸುತ್ತಿದ್ದರು ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

4. ದಾವಾ ಶೆಡ್ಯೂಲ್-ಬಿ-3 ನೇ ಆಸ್ತಿಯು ಶಿವಶಂಕ್ರಯ್ಯ ರುದ್ರಯ್ಯ ವರದಿಮಠ ಇವರ ಹೆಸರಿನಲ್ಲಿದೆ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ. ಹಾವೇರಿ.